ಸಂಬಂಧಪಟ್ಟವರ ಹೆಸರುಗಳನ್ನು ತಿಳಿಸಬೇಕೆಂದು ಕೇಳಿದ್ದಕ್ಕೆ ಅದನ್ನು ಹೇಳುವುದಕ್ಕಾಗುವುದಿಲ್ಲವೆಂದು ಹೇಳಿದಿರಿ. ಕೇಸುಗಳನ್ನು ಲಾಡ್ಜ್ ಮಾಡುವಾಗ ಮತ್ತು ಇನ್‌ವೆಸ್ಟಿಗೇಷನ್ ಟೈಂ ನಲ್ಲಿಯೂ ಅವರ ಹೆಸರುಗಳನ್ನು ತಿಳಿದು ಕೊಳ್ಳುವುದಕ್ಕೆ ಸಾಧ್ಯವಿದ್ದುದರಿಂದ, ಕಮ್ಮಲ್ಲಿ ಅದರ ಬಗ್ಗೆ ಸಂಪೂರ್ಣ ಮಾಹಿತಿ ಇರುವಾಗ, ಅವರ ಹೆಸರುಗಳನ್ನು ಏಕೆ ತಿಳಿಸುವುದಕ್ಕಾಗುವುದಿಲ್ಲವೆಂದು ಹೇಳುತ್ತೀರಿ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ನಾನು ಆ ಹೆಸರುಗಳನ್ನು ತಿಳಿಸುವುದಕ್ಕಾಗುವುದಿಲ್ಲವೆಂದು ಹೇಳಲಿಲ್ಲ. ಅವರ ಹೆಸರುಗಳು ನಮ್ಮ ಮುಂದೆ ಇಲ್ಲವೆಂದು ಹೇಳಿದ್ದೇನೆ.

SRI DODDATHIMMIAH.—As you are aware the West Bengal Government has recently enacted a law imposing rigorous punishment for the offences of food adulteration to bring in such a law ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇದು ವೆಸ್ಟ್‌ಬೆಂಗಾಲ್ ಆಕ್ಟ್ ಪ್ರಕಾರವಲ್ಲ, ಮೈಸೂರು ಎಕ್ಸೈಜ್ ಆಕ್ಟ್ ಪ್ರಕಾರ ಈ ಕೆಲಸ ನಡೆಯುತ್ತಾ ಇರುವುದು.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಕಲಬೆರಕೆ ಸಾರಾಯಿ ಹಾಗೂ ಸೇಂದಿ ಈಗ ಅಲ್ಲಿ ಮಾರುತ್ತಿದ್ದಾರೆ. 100 ಲೀಟರನ್ನು ಸಾವಿರ ಲೀಟರ್ ಆಗಿ ಮಾಡುತ್ತಿದ್ದಾರೆ. ಇದರಿಂದ ಸರ್ಕಾರಕ್ಕೆ ಬರುವ ದುಡ್ಡು ಸರಿಯಾಗಿ ಬರುವುದಿಲ್ಲ. ಇದಕ್ಕೆ ಇನ್‌ಕಂಟ್ಯಾಕ್ಸ್, ಸೇಲ್ಸ್‌ಟ್ಯಾಕ್ಸ್, ಎಜ್ಯುಕೇಷನ್ ಸೆಸ್ ಏನೂ ಇಲ್ಲ ಎಲ್ಲಾ ಹಣವೂ ಕಪ್ಪು ಹಣವಾಗುತ್ತಿದೆ. ಸರ್ಕಾರಕ್ಕೆ ಇದರಿಂದ ಹೆಚ್ಚಿನ ಹೊರೆ ಬೀಳುತ್ತದೆ. ಇಂಥಾದ್ದನ್ನು ತಡೆಗಟ್ಟುವುದಕ್ಕೆ ಏನಾದರೂ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಾ

ಹೆಚ್. ಎಂ. ಚನ್ನಬಸಪ್ಪ.—ಅಡಲ್ಟ್ರೇಷನ್ ಪ್ರಿವೆಂಟ್ ಮಾಡಬೇಕು. ಅದಕ್ಕಾಗಿ ಸೆಂಟ್ರಲ್ ಇಂಟಲಿಜೆನ್ಸ್ ಬ್ಯೂರೊ, ಮುಂತಾದ ಸಂಸ್ಥೆಗಳಿವೆ, ಅವು ಸರಿಯಾಗಿ ಕೆಲಸ ಮಾಡಲಿಲ್ಲವೆಂದು ಹೇಳಿದರೆ, ಆಗ ಅವುಗಳಿಂದ ಸರಿಯಾಗಿ ಕೆಲಸಮಾಡಿಸತಕ್ಕದ್ದು ನಮ್ಮ ಕೆಲಸವಾಗಿದೆ.

KRISHNA DAIRY CO-OPERATIVE SOCIETY, HULKOTI

109. SRI J. L. KABADE (Ballolli).—Will the minister for Co-operation be pleased to state.—

(Sri J. L. Kabade)

(*a*) whether there is one dairy by name Krishna Dairy Co-operative Society in Hulkoti, Dharwar District ;

(*b*) if so, when was it registered and who was its Chief Promoter ;

(*c*) the extent of State Government's financial assistance and such assistance given by the National Co-operative Development Council, New Delhi to this dairy ;

(*d*) the present working condition and financial position of this society ;

(*e*) whether it is a fact that the Minister for Agriculture and Forests was the founder of this society ;

(*f*) whether it is a fact that the said Krishna Dairy has incurred heavy loss during the presidentship of of the present minister for Agriculture and Forests ;

(*g*) whether there are any grave and serious remarks in the audit report against the management of the said society ?

SRI A. SHANKARA ALVA (Minister for Co-operation.) – (*a*) Yes

(*b*) It was registered on 1-9-71. The Chief Promoter was Sri M. V. Mulimani of Binakadakatte.

(*c*) NCDC Block Capital loan — Rs. 7.30 lakhs
Government contribution towards share capital — Rs. 1.63 lakhs

(*d*) *Vide* Statement appended

(*e*) No

(*f*) The minister for Agriculture and Forests was not the president of the society at any time and hence does not arise.

(*g*) The accounts of the society are yet to be audited and hence the question does not arise.

STATEMENT

Showing the Krishna Dairy Milk Producers Co-operative Society Limited, Hulkoti-Financial position as on 15-7-1973

	Liabilities	Amount		Assets		Amount
1	Share capital	1,02,000	1	Current Account with KCC Bank Gadag	...	3,68,081-50
2	Government share capital	1,63,000	2	S. B. Account with KCC Bank Dharwar (Joint Account)	...	81,500-00
3	Entrance fee	250	3	Dead stock	...	139-50
4	Government Loan	7,30,000	4	Stationery	...	148-50
5	Deposit	35,000	5	Dairy plant	...	4,80,000-00
6	Interest received	1,485	6	Dairy equipment and accessories	...	90,000-00
			7	Investment in the shares of Co-operative societies		10,600-00
			8	Entrance fee paid	...	9-50
			9	Pay (receivable)		980-00
			10	Cash on hand	...	276-00
		10,31,735-00				10,31,735-00

ಶ್ರೀ ಜೆ ಎಲ್. ಕಬಾಡಿ :— (ಉ) ಪ್ರಶ್ನೆಗೆ ಉತ್ತರವಾಗಿ 'ನಿಜವೆಲ್ಲ' ಎಂಬುದಾಗಿ ಹೇಳಿದೆ. ಈ ಹೈನಿನ ಸಂಘವನ್ನು ಸ್ಥಾಪನೆ ಮಾಡುವುದಕ್ಕೆ ಪೂರ್ವದಲ್ಲಿ ಮೊದಲು ಇದು ಖಾಸಗಿ ಸಂಸ್ಥೆಯಾಗಿದ್ದು, ಆದರ ವ್ಯವಸ್ಥಾಪಕರಾಗಿ ಅವರು ಇದ್ದರೆಂಬುದು ನಿಜವೇ ?

ಶ್ರೀ ಎ. ಶಂಕರ ಆಳ್ವ :—ಮೊದಲು ಈ ಕೃಷ್ಣಾ ಸಹಕಾರಿ ಹೈನು ಕೇಂದ್ರ ಪಾರ್ಟ್‌ನರ್‌ಷಿಪ್ ಆಗಿ ಒಂದು ಪ್ರತ್ಯೇಕ ಸೊಸೈಟಿಯಾಗಿತ್ತು. ಇದರಲ್ಲಿ ಮಂತ್ರಿಗಳೂ ಸಹ ಪಾರ್ಟಿಯಾಗಿದ್ದಾರೆ.

ಶ್ರೀ ಜೆ. ಎಲ್ ಕಬಾಡಿ :—ಇದು ಒಂದುಖಾಸಗೀ ಸಂಸ್ಥೆಯಾಗಿತ್ತು. ಈಗ ಆ ಒಂದು ಸಂಸ್ಥೆಯನ್ನು ಸಹಕಾರ ಸಂಘಕ್ಕೆ ವರ್ಗಾಯಿಸಿ ತೆಗೆದುಕೊಂಡಿದ್ದು ನಿಜವೇ ?

ಶ್ರೀ ಎ. ಶಂಕರ ಆಳ್ವ :—ಅದು ನನಗೆ ಗೊತ್ತಿಲ್ಲ

ಶ್ರೀ ಕಾಗೋಡು ತಿಮ್ಮಪ್ಪ :—ಈ ಸಹಕಾರ ಸಂಘಕ್ಕೆ ಡೈರಿ ಪ್ಲಾಂಟ್ ಗೋಸ್ಕರ 4 ಲಕ್ಷ 80 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದ್ದೀರಿ. ಮತ್ತು ಡೈರಿ ಎಕ್ವಿಪ್‌ಮೆಂಟ್ ಅಂಡ್ ಅಕ್ಸ್‌ಸರೀಸ್‌ಗೆ 90 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಈ ಡೈರಿ ಪ್ಲಾಂಟನ್ನು ಯಾರಿಂದ ಖರೀದಿ ಮಾಡಿದ್ದೀರಿ ? ಡೈರಿ ಎಕ್ವಿಪ್‌ಮೆಂಟ್ ಅಂಡ್ ಅಕ್ಸ್‌ಸರೀಸ್‌ನಲ್ಲಿ ಎಮ್ಮೆ ಮತ್ತು ಆಕಳನ್ನು ಕೊಂಡದ್ದು ಸೇರಿದೆಯೇ ?

ಶ್ರೀ ಎ. ಶಂಕರ ಆಳ್ವ :—ಇದರಲ್ಲಿ ಕೃಷ್ಣಾ ಡೈರಿಯವರ ಪಾರ್ಟ್‌ನರ್‌ಷಿಪ್ ಸಂಬಂಧವಿತ್ತು. ಈಗ ಸೊಸೈಟಿಯವರು ಅದನ್ನು ಅವರಿಂದ ತೆಗೆದುಕೊಂಡಿದ್ದಾರೆ. ನಾಲ್ಕು ಲಕ್ಷ 80 ಸಾವಿರ ರೂಪಾಯಿಗಳಲ್ಲಿ ಡೈರಿ ಪ್ಲಾಂಟನ್ನು ಕೃಷ್ಣಾ ಡೈರಿಯಿಂದ ಈ ಸೊಸೈಟಿಯವರು ಕೊಂಡುಕೊಂಡಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ :— ಡೈರಿ ಎಕ್ವಿಪ್‌ಮೆಂಟ್ ಅಂಡ್ ಅಕ್ಸಸರೀಸ್ ಗಾಗಿ 90 ಸಾವಿರ ರೂಪಾಯಿಗಳನ್ನು ಅವರು ಏಕೆ ಖರ್ಚು ಮಾಡಿದ್ದಾರೆ ? ಅದನ್ನು ಯಾರಿಂದ ಕೊಂಡಿದ್ದಾರೆ ?

ಶ್ರೀ ಶಂಕರ ಆಳ್ವ :— ಇದನ್ನು ಯಾರಿಂದ ಕೊಂಡುಕೊಂಡಿದ್ದಾರೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಡೈರಿ ಪ್ಲಾಂಟನ್ನು ಅವರಿಂದ ಸೊಸೈಟಿಯವರು ನಾಲ್ಕು ಲಕ್ಷ 80 ಸಾವಿರ ರೂಪಾಯಿಗಳಿಗೆ ಕೊಂಡಿದ್ದಾರೆ ಅದರ ಬಗ್ಗೆ ಸೂಪರಿಂಟೆಂಡೆಂಟ್

ಆಫ್ ಡೈರಿ ಫಾರಂ ಆವರಿಂದ ವ್ಯಾಲ್ಯೂಯೇಷನ್ ಮಾಡಿಸಿಕೊಂಡು ತೆಗೆದು ಕೊಂಡಿದ್ದಾರೆ. ಆದರೆ ಎಕ್ವಿಪ್‌ಮೆಂಟ್ಸ್ ಮತ್ತು ಆಕ್ಸಸರೀಸ್ ಅವನ್ನು ಯಾರಿಂದ ತೆಗೆದುಕೊಂಡಿದ್ದಾರೋ ಗೊತ್ತಿಲ್ಲ. ಅವನ್ನು ಪ್ರತ್ಯೇಕವಾಗಿ ಪರ್ಚೇಜ್ ಮಾಡಿ ದ್ದಾರೋ ಅಥವಾ ಇವರಿಂದಲೇ ತೆಗೆದುಕೊಂಡಿದ್ದಾರೋ ಎಂದು ಹೇಳುವುದಕ್ಕೆ ನನ್ನಲ್ಲಿ ಮಾಹಿತಿ ಇಲ್ಲ.

ಶ್ರೀ ಹೆಚ್. ಟಿ. ಕೃಷ್ಣಪ್ಪ :—ಈ ಸಹಕಾರ ಸಂಘದಿಂದ ಎಷ್ಟು ಹಾಲು ಉತ್ಪಾದನೆಯಾಗುತ್ತದೆ? ಅದನ್ನು ಹಂಚಲಾಗುತ್ತದೆಯೇ?

ಶ್ರೀ ಎ. ಶಂಕರ ಆಳ್ವ :—ಅದಿನ್ನೂ ಪ್ರಾರಂಭ ಆಗಿಲ್ಲ. ಏಕೆಂದರೆ ಬಾಯಿಲರ್ಸ್ ಇನ್ಸ್‌ಪೆಕ್ಟರ್ ಅದರಿಂದ ಅದಕ್ಕೆ ಪರವಾನೆ ಇನ್ನೂ ಸಿಗಲಿಲ್ಲ.

ಶ್ರೀ ಜೆ ಎಲ್. ಕಬಾಡಿ :—ಮಾನ್ಯ ಸಹಕಾರೀ ಮಂತ್ರಿಯವರು ಅಲ್ಲಿಗೆ ಜುಲ್ಯಾ ತಿಂಗಳಲ್ಲಿ ಭೇಟಿ ಕೊಟ್ಟಾಗ ಈ ಕೃಷ್ಣ ಡೈರಿಗೆ ಭೇಟಿ ಕೊಟ್ಟಿರುವರೇ; ಮತ್ತು ಹಾಗೆ ಭೇಟಿ ಕೊಟ್ಟಾಗ ಆಲ್ಲಿರತಕ್ಕಂತಹ ಹಸುಗಳನ್ನು ಎಮ್ಮೆಗಳನ್ನು, ಮತ್ತು ಮೆಶೀನು ಕೆಲಸ ಮಾಡುವುದನ್ನು ನೋಡಿದ್ದಾರೆಯೆ? ಏಕೆಂದರೆ ಮೊನ್ನೆ ಎಸ್ಟಿಮೇಟ್ ಕಮಿಟಿಯವರು ಸಹ ಹೋಗಿ ನೋಡಿಕೊಂಡು ಬಂದಿದ್ದಾರೆ.

1-30 P. M.

ಶ್ರೀ ಎ. ಶಂಕರ ಆಳ್ವ :—ಆಲ್ಲಿಗೆ ನಾನು ಭೇಟಿ ಕೊಟ್ಟಿಲ್ಲ

ಶ್ರೀ ಕಾಗೋಡು ತಿಮ್ಮಪ್ಪ :—ಇದರಲ್ಲಿ ಬಹಳ ಮಹತ್ವವಾದ ವಿಚಾರ ಅಡಗಿದೆ. ಆ ಡೈರಿಯಿಂದ ಸುಮಾರು ನಾಲ್ಕು ಲಕ್ಷ 80 ಸಾವಿರ ರೂಪಾಯಿಯ ಡೈರಿ ಪ್ಲಾಂಟನ್ನು ಈ ಸೊಸೈಟಿಯವರು ತೆಗೆದುಕೊಂಡಿದ್ದಾರೆ. ಆದ್ದರಿಂದ ಇದಕ್ಕೆ ಇನ್ನು ಹೆಚ್ಚಿನ ಅವಕಾಶ ಕೊಡಬೇಕು.

ಅಧ್ಯಕ್ಷರು :—ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ.

AUCTION OF TODDY AND ARRACK

133. SRI B. SATHYANARAYANA SINGH (Hospet)—Will the Chief Minister be pleased to state :—

(a) the result of the individual shopwise system of auction of toddy and arrack introduced in the District.